## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಸದಸ್ಯರ ಹೆಸರು | ಶ್ರೀ ಸಿ. ಎನ್ ಮಂಜೇಗೌಡ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 829(913) |
| ಉತ್ತರಿಸಬೇಕಾದ ದಿನಾಂಕ | 17.12.2024 |
| ಉತ್ತರಿಸಬೇಕಾದವರು | ಮಾನ್ಯ ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ನಿವೇಶನ ಮಂಜೂರಾತಿ ಕೋರಿ ಬಂದ ಅರ್ಜಿಗಳ ಪೈಕಿ ಸುಮಾರು 70 ಸಾವಿರ ಅರ್ಜಿಗಳು ಪ್ರಾಧಿಕಾರದಲ್ಲೆ ಬಾಕಿ ಉಳಿದಿದ್ದು, ಈ ಅರ್ಜಿಗಳಿಂದ ಬಂದ ಹಣ ಎಷ್ಟು; | ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ನಿವೇಶನ ಕೋರಿ 2011 ರಲ್ಲಿ ಹಾಗೂ 2017 ರಲ್ಲಿ ಅರ್ಜಿ ಆಹ್ವಾನಿಸಿದ್ದು, ಈ ಪೈಕಿ 2011 ರಲ್ಲಿ 82652 ಅರ್ಜಿಗಳು ಸ್ವೀಕೃತವಾಗಿದ್ದು, ಇವುಗಳಿಂದ ಒಟ್ಟು ರೂ.2,65,11,58,755/- (ರೂ. ಇನ್ನೂರು ಅರವತ್ತೈದು ಕೋಟಿ ಹನ್ನೊಂದು ಲಕ್ಷ ಐವತ್ತೆಂಟು ಸಾವಿರದ ಏಳುನೂರ ಐವತ್ತೈದು ಮಾತ್ರ) ಹಾಗೂ 2017ರಲ್ಲಿ 32959 ಅರ್ಜಿಗಳು ಸ್ವೀಕೃತವಾಗಿದ್ದು, ಇವುಗಳಿಂದ ಒಟ್ಟು ರೂ. 1,17,57,42,096/- (ರೂ. ನೂರ ಹದಿನೇಳು ಕೋಟಿ ಐವತ್ತೇಳು ಲಕ್ಷದ ನಲವತ್ತೆರಡು ಸಾವಿರದ ತೊಂಭತ್ತಾರು ಮಾತ್ರ) ಸ್ವೀಕೃತವಾಗಿರುತ್ತದೆ. |
| ಆ) | ಅರ್ಜಿ ಹಾಕಿದಂತಹವರಿಗೆ ಯಾವ ಕಾಲಮಿತಿಯೊಳಗೆ ನಿವೇಶನ ಹಂಚಿಕೆ ಮಾಡಲು ಕ್ರಮ ಕೈಗೊಳ್ಳಲಾಗುವುದು? | ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ನಿವೇಶನಕ್ಕಾಗಿ ಅರ್ಜಿ ಆಹ್ವಾನಿಸಿದಾಗ ಸಾರ್ವಜನಿಕರಿಂದ ಸ್ವೀಕೃತವಾದ ಅರ್ಜಿಗಳೊಂದಿಗೆ, ಈ ಹಿಂದೆ ಅರ್ಜಿದಾರರು ನಿವೇಶನ ಕೋರಿ ಸಲ್ಲಿಸಿರುವ ಅರ್ಜಿಗಳನ್ನು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ (ನಿವೇಶನ ಹಂಚಿಕೆ) ನಿಯಮಗಳು 1991 ರಂತೆ ಪರಿಗಣಿಸಿ ಪ್ರಾಧಿಕಾರವು ನಿವೇಶನ ಹಂಚಿಕೆ ಮಾಡುವಾಗ ಅರ್ಜಿದಾರರ ಪ್ರಯತ್ನಗಳನ್ನು ಪರಿಶೀಲಿಸಿ ಜೇಷ್ಟತೆ ಆಧಾರದ ಮೇಲೆ ನಿವೇಶನ ಹಂಚಿಕೆ ಮಾಡಲು ಕ್ರಮಕೈಗೊಳ್ಳಲಾಗುವುದು.<br><br>ಮುಂದುವರೆದು ಬಾಕಿ ಉಳಿದಿರುವ ಅರ್ಜಿಗಳಿಗೆ ಪ್ರಾಧಿಕಾರದಿಂದ ನಿವೇಶನ ಹಂಚಿಕೆಗೆ ಮುಂದಿನ ಅಧಿಸೂಚನೆ ಹೊರಡಿಸಿದಾಗ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ (ನಿವೇಶನ ಹಂಚಿಕೆ) ನಿಯಮಗಳು 1991ರಂತೆ ನಿಯಮಾನುಸಾರ ಪರಿಗಣಿಸಲಾಗುವುದು. |

ಸಂಖ್ಯೆ :ನಅಇ 475 ಮೈಅಪ್ರಾ 2024(ಇ)

**(ಬಿ.ಎಸ್ ಸುರೇಶ)**
ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು